2017 ಕ.ತೀ.ವ. 891

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಶ್ರೀ ಚಂದ್ರಶೇಖರ್ ಎಲಿಗಾರ್ –ವಿರುದ್ಧ– ಕರ್ನಾಟಕ ರಾಜ್ಯ (ಲೋಕಾಯುಕ್ತ ಪೊಲೀಸ್ ಮೂಲಕ, ಧಾರವಾಡ ಜಿಲ್ಲೆ) ಮತ್ತು ಇನ್ನೊಬ್ಬರು *

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಎದುರುದಾರ/ಲೋಕಾಯುಕ್ತ ಪೊಲೀಸರು ರಿಟ್ ಅರ್ಜಿದಾರರ ವಿರುದ್ಧ ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ ಕಲಂ 13(2)ರ ಜೊತೆಗೂಡಿದಂತೆ ಕಲಂ 13(1)(ಡಿ) ಹಾಗೂ ಕಲಂ 13(1)(ಇ)ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುವರೆಂದು ದೂಷಿಸಿ ಹೂಡಿದ ಪ್ರಥಮ ವರ್ತಮಾನ ವರದಿಯನ್ನು ರದ್ದುಗೊಳಿಸುವಂತೆ ಕೋರಿ ಸದರಿ ರಿಟ್ ಅರ್ಜಿ.

ವಾಹನದಲ್ಲಿ ಅಪಾರ ಪ್ರಮಾಣವಾದ ಹಣವನ್ನು ಅರ್ಜಿದಾರರು ಸಾಗಿಸುತ್ತಿದ್ದಾಗ, ಆ ಹಣವನ್ನು ನ್ಯಾಯ ಸಮ್ಮತವಾಗಿ ಹೊಂದಿರುವರೇ ಅಥವಾ ಇಲ್ಲವೆ ಎಂದು ತಿಳಿದುಕೊಳ್ಳಲು ಆರಕ್ಷಕ ಅಧಿಕಾರಿಯು ನಡೆಸಿದ ಪೂರ್ವ ವಿಚಾರಣೆ, ತನಿಖೆ ಎಂದು ಪರಿಗಣಿಸಲಾಗುವುದಿಲ್ಲ. ಅರ್ಜಿದಾರರು ವಿವರಣೆ ನೀಡಲಾಗದೆ ಹಣವನ್ನು ಹೊಂದಿದ್ದನ್ನು ಮನಗಂಡು ಎರಡನೇ ಎದುರುದಾರ ಆರಕ್ಷಕರು, ಹಣ ಮತ್ತು ವಾಹನವನ್ನು ಜಫ್ತಿ ಮಾಡಿ, ಅರ್ಜಿದಾರರನ್ನು ಬಂಧಿಸಿ ಅಧಿಕಾರ ವ್ಯಾಪ್ತಿಯಿರುವ ಲೋಕಾಯುಕ್ತ ಆರಕ್ಷಕರಿಗೆ ಪ್ರಕರಣವನ್ನು ದಾಖಲಿಸಲು ಹಸ್ತಾಂತರಿಸಿದ ಕ್ರಮದಲ್ಲಿ ಯಾವುದೇ ದೋಷವಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

* ರಿಟ್ ಅರ್ಜಿ ಸಂಖ್ಯೆ.: 108338/2015, ದಿನಾಂಕ: 14ನೇ ಮಾರ್ಚ್, 2017.

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

1. *(2011) 3 ಎಸ್‌ಸಿಸಿ 758*
*ಅಶೋಕ್ ಕುಮಾರ್ ತೋಡಿ –ವಿರುದ್ಧ–*
*ಕಿಶ್ವರ್ ಜಹಾನ್ ಮತ್ತು ಇತರರು (ಉಲ್ಲೇ) 4*
2. *2013 (8) ಸುಪ್ರೀಂ 1*
*ಲಲಿತಾ ಕುಮಾರಿ –ವಿರುದ್ಧ–*
*ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು (ಉಲ್ಲೇ) 5*
3. *2012 (5) ಕೆಎಲ್‌ಜೆ 545 (ಕಂಡಿಕೆ 35)*
*ಎಲ್. ಶಂಕರ್ ಮೂರ್ತಿ ಮತ್ತು ಇತರರು –ವಿರುದ್ಧ–*
*ರಾಜ್ಯ ಲೋಕಾಯುಕ್ತ ಪೊಲೀಸ್ (ಉಲ್ಲೇ) 6*
4. *2013 (5) ಕೆಎಲ್‌ಜೆ 470(ವಿಭಾ)*
*ಗಿರೀಶ್ ಚಂದ್ರ ಮತ್ತು ಇನ್ನೊಬ್ಬರು –ವಿರುದ್ಧ–*
*ರಾಜ್ಯ ಪೊಲೀಸು ಲೋಕಾಯುಕ್ತ ಯಾದಗಿರಿ (ಉಲ್ಲೇ) 6*
5. *ಕೆಸಿಸಿಆರ್ 2015 ಭಾಗ–II 1655*
*ರಂಗನಾಥ್ –ವಿರುದ್ಧ– ಕರ್ನಾಟಕ ರಾಜ್ಯ (ಉಲ್ಲೇ) 8*

ಅರ್ಜಿದಾರರ ಪರ : ಶ್ರೀ ಎಂ.ಎಸ್. ಭಾಗವತ್, ವಕೀಲರು.
ಪ್ರತ್ಯರ್ಜಿದಾರರ ಪರ : ಶ್ರೀ ಮಲ್ಲಿಕಾರ್ಜುನಸ್ವಾಮಿ ಬಿ. ಹಿರೇಮಠ್, ವಕೀಲರು.

## ಆದೇಶ

**ಸನ್ಮಾನ್ಯ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ :**

ಭ್ರಷ್ಟಾಚಾರ ನಿರ್ಮೂಲನಾ ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಲಾದ 13(1)(ಡಿ) ಮತ್ತು 13(1)(ಇ) ಪ್ರಕರಣದ ಮೇರೆಗೆ ದಂಡಿಸಬಹುದಾದ

ಅಪರಾಧಕ್ಕಾಗಿ ಎದುರುದಾರ ಲೋಕಾಯುಕ್ತ ಪೊಲೀಸರು ನೋಂದಾಯಿಸಿದ ಅಪರಾಧ ಸಂಖ್ಯೆ: 4/2015ರಲ್ಲಿನ ಪ್ರಥಮ ಮಾಹಿತಿ ವರದಿಯನ್ನು ರದ್ದುಗೊಳಿಸಲು ಕೋರಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಲಾಗಿದೆ.

2. ದಾಖಲೆಗಳಿಂದ ಹೊರ ಬಿದ್ದಿರುವ ಸಂಕ್ಷಿಪ್ತ ವಾಸ್ತವಿಕ ಸಂಗತಿಗಳು ಈ ಮುಂದಿನಂತಿದೆ:

ಅರ್ಜಿದಾರರು 1983ರಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ನೇಮಕಗೊಂಡು, ಇಲ್ಲಿಯವರೆಗೆ ಕಾರ್ಯನಿರ್ವಹಿಸುತ್ತಿದ್ದು ತದನಂತರ ಬಡ್ತಿಯ ಮೇಲೆ ದಿನಾಂಕ 30.3.2014ರಂದು ಅಧೀಕ್ಷಕ ಎಂಜಿನಿಯರ್ ಆಗಿ ನಿಯೋಜನೆಗೊಂಡಿದ್ದಾರೆ.

ನೋಂದಣಿ ಸಂಖ್ಯೆ: ಕೆಎ–01–ಜಿ–4572ನ್ನು ಹೊಂದಿರುವ ಇನೋವಾ ಕಾರಿನಲ್ಲಿ ಅಪಾರ ಪ್ರಮಾಣದ ಮೊತ್ತವನ್ನು ಕೆಲವು ವ್ಯಕ್ತಿಗಳು ಧಾರವಾಡದಿಂದ ಬೆಂಗಳೂರಿಗೆ ಸಾಗಿಸುತ್ತಿದ್ದಾರೆಂಬ ಮಾಹಿತಿಯನ್ನು ಬೆಂಗಳೂರಿನ ಲೋಕಾಯುಕ್ತ ಎಡಿಜಿಪಿಯವರಿಂದ ಚಿತ್ರದುರ್ಗದ ಲೋಕಾಯುಕ್ತ ಪೊಲೀಸರು ಸ್ವೀಕರಿಸಿದ್ದು ವಾಸ್ತವವಾಗಿ, ಈ ಸಂಬಂಧದಲ್ಲಿ ಯುಕ್ತಕ್ರಮವನ್ನು ಕೈಗೊಳ್ಳಲು ಚಿತ್ರದುರ್ಗ ಜಿಲ್ಲೆಯ ಕರ್ನಾಟಕ ಲೋಕಾಯುಕ್ತದ ಪೊಲೀಸು ಉಪ–ಅಧೀಕ್ಷಕರನ್ನು ಕೋರಿದ್ದರೆಂಬುದು ಪ್ರಾಸಿಕ್ಯೂಷನ್‌ನ ವಾದವಾಗಿದೆ.

ಅಂಥ ಮಾಹಿತಿಯ ಆಧಾರದ ಮೇಲೆ, ಚಿತ್ರದುರ್ಗದ ಕರ್ನಾಟಕ ಲೋಕಾಯುಕ್ತ ಪೊಲೀಸು ಅಧೀಕ್ಷಕರು, ತಮ್ಮ ಸಿಬ್ಬಂದಿಯೊಂದಿಗೆ ಸದರಿ ಸ್ಥಳಕ್ಕೆ ಧಾವಿಸಿದ್ದು, ಬೆಂಗಳೂರಿನ ಕಡೆಗೆ ಚಲಿಸುತ್ತಿದ್ದ ಸದರಿ ವಾಹನವನ್ನು ಪತ್ತೆ ಹಚ್ಚಿದ್ದಾರೆ. ಸದರಿ ವಾಹನವನ್ನು ಟೋಲ್ ಪ್ಲಾಜಾದ ಬಳಿ ಅಡ್ಡಗಟ್ಟಿದ್ದು, ಅರ್ಜಿದಾರನು ಸದರಿ ಕಾರಿನೊಳಗಡೆ ಇದ್ದದ್ದು ರುಜುವಾತಾಗಿದ್ದು, ಅವನು 36,85,500/–ರೂ.ಗಳ ಹೆಚ್ಚಿನ ಮೊತ್ತವನ್ನು ಸಾಗಿಸುತ್ತಿದ್ದನು. ವಿಚಾರಣೆಯಾದ

ಮೇಲೆ ಸದರಿ ವ್ಯಕ್ತಿಯು ಯಾವುದೇ ಯುಕ್ತವಿವರಣೆಯನ್ನು ನೀಡಿರಲಿಲ್ಲ. ಆದುದರಿಂದ ಪೊಲೀಸು ಅಧೀಕ್ಷಕರು ಮಹಜರಿನ ಮೇರೆಗೆ ಸದರಿ ಮೊತ್ತವನ್ನು ವಶಪಡಿಸಿಕೊಂಡು ಆಪಾದಿತನನ್ನು ಬಂಧಿಸಿ ಲೋಕಾಯುಕ್ತ ಪೊಲೀಸರ ಅಧಿಕಾರ ವ್ಯಾಪ್ತಿಯ ಉಪ–ಅಧೀಕ್ಷಕರ ಬಳಿಗೆ ಹೋಗಿ, ಮೇಲಿನ ಸದರಿ ಸಂಗತಿಗಳನ್ನು ವಿವರಿಸುವ ದೂರನ್ನು ದಾಖಲಿಸಿದ್ದು ಪ್ರಕರಣವನ್ನು ನೋಂದಾಯಿಸಲು ಲೋಕಾಯುಕ್ತ ಪೊಲೀಸರನ್ನು ಕೋರಿದ್ದಾರೆ. ಪೊಲೀಸು ಉಪ–ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ, ಇವರು, ಭ್ರಷ್ಟಾಚಾರ ನಿರ್ಮೂಲನಾ ಅಧಿನಿಯಮದ 13(1)(ಡಿ) ಮತ್ತು 13(1)(ಇ) ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಅಪರಾಧ ಸಂ.4/2015ರಲ್ಲಿ ಪ್ರಕರಣವನ್ನು ದಾಖಲಿಸಿ, ವಿಷಯವನ್ನು ತನಿಖೆ ಮಾಡಲು ಮುಂದಾಗಿದ್ದಾರೆ. ಪ್ರಕರಣವನ್ನು ದಾಖಲಿಸದೆ ತನಿಖೆಯನ್ನು ನಡೆಸಲು ಸಾಧ್ಯವಿಲ್ಲವೆನ್ನುವ ಮತ್ತು ಭಾಗಶಃ ತನಿಖೆಯನ್ನು ನಡೆಸಿದ ನಂತರ ಪ್ರಕರಣವನ್ನು ದಾಖಲಿಸಲು ಸಾಧ್ಯವಿಲ್ಲವೆನ್ನುವ ಆಧಾರದ ಮೇಲೆ ಈ ನ್ಯಾಯಾಲಯದ ಮುಂದೆ ಪ್ರಕರಣವನ್ನು ದಾಖಲಿಸುವುದನ್ನು ಪ್ರಶ್ನಿಸಲಾಗಿದೆ, ಆದುದರಿಂದ ಸಂಪೂರ್ಣ ವ್ಯವಹರಣೆಗಳನ್ನು ದೂಷಿಸಲಾಗಿದ್ದು, ಇದನ್ನು ರದ್ದುಗೊಳಿಸಲು ತಕ್ಕುದಾಗಿರುತ್ತದೆಂದು ವಾದಿಸಿದ್ದಾರೆ.

3. ಅರ್ಜಿದಾರರ ಪರವಾದ ಮಾನ್ಯ ವಕೀಲರಾದ ಶ್ರೀ ಎಂ.ಎಸ್. ಭಾಗವತ್‌ರವರ ಮತ್ತು ಎದುರುದಾರರ ಪರವಾದ ಮಾನ್ಯ ವಕೀಲರಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿ, ಬಿ. ಹಿರೇಮಠ್‌ರವರ ವಾದಗಳನ್ನು ನಾನು ಆಲಿಸಿದ್ದೇನೆ.

4. ವಾಡಿಕೆಯಂತೆ, ಮಾನ್ಯ ವಕೀಲರಾದ ಶ್ರೀ ಭಾಗವತ್‌ರವರು, ಈ ಪ್ರಕರಣದಲ್ಲಿ ಉದ್ಭವಿಸಿದ ಪ್ರಶ್ನೆಯ ಮೇಲೆ ವಿವಿಧ ನಿರ್ಣಯಗಳನ್ನು ವಿವರಿಸಿ ತಮ್ಮ ವಾದಗಳನ್ನು ತುಂಬಾ ಪರಿಣಾಮಕಾರಿ ರೀತಿಯಲ್ಲಿ ನಿವೇದಿಸಿದ್ದಾರೆ. ಈ ಸಂಬಂಧದಲ್ಲಿ ಅವರು ವಿವಿಧ ನಿರ್ಣಯಗಳನ್ನು ಅವಲಂಬಿಸಿದ್ದಾರೆ. ಮೊದಲನೆಯದಾಗಿ, ತನಿಖೆ ನಡೆಸಲು ಕಾರಣವೇನು ಎಂಬ ಬಗ್ಗೆ ಈ ನ್ಯಾಯಾಲಯಕ್ಕೆ ತೋರಿಸುವ ಉದ್ದೇಶಕ್ಕಾಗಿ,

***ಅಶೋಕ್ ಕುಮಾರ್ ತೋಡಿ –ವಿರುದ್ಧ– ಕಿಶ್ವರ್ ಜಹಾನ್ ಮತ್ತು ಇತರರು*** [1] ವರದಿಯಾದ ನಿರ್ಣಯದತ್ತ ಅವರು ನನ್ನ ಗಮನವನ್ನು ಸೆಳೆದಿದ್ದಾರೆ. ಸದರಿ ಪ್ರಕರಣದಲ್ಲಿ ತನಿಖೆಗೆ ಸಂಬಂಧಪಟ್ಟ ಹಲವಾರು ಹಂತಗಳನ್ನು ದಂಡ ಪ್ರಕ್ರಿಯಾ ಸಂಹಿತೆಯು ಅವಲೋಕಿಸುತ್ತದೆಂಬುದನ್ನು ತಿಳಿಸುತ್ತದೆ. ಪ್ರಕರಣ ದಾಖಲಾದ ಸ್ಥಳಕ್ಕೆ ಹೋಗುವಿಕೆ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ವಿವರಿಸುವ ಸ್ಥಳ, ಅಪರಾಧ ಎಸಗಿರುವುದಕ್ಕೆ ಸಂಬಂಧಪಟ್ಟ ಸಾಕ್ಷ್ಯವನ್ನು ಸಂಗ್ರಹಿಸಿ, ಶಂಕಿತ ಅಪರಾಧಿಯನ್ನು ಪತ್ತೆಮಾಡಿ ಬಂಧಿಸುವಿಕೆ, ಸಾಕ್ಷಿದಾರರ ವಿವರಣೆಯನ್ನು ದಾಖಲಿಸುವಿಕೆ, ಶೋಧನೆ, ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಹಂತಗಳ ಬಗ್ಗೆ ಮತ್ತು ತನಿಖಾಧಿಕಾರಿಯು ಅಭಿಪ್ರಾಯ ರೂಪಿಸುವಿಕೆ, ಮತ್ತು ಅಂತಿಮವಾಗಿ ದೋಷಾರೋಪ ಪಟ್ಟಿಯನ್ನು ಸಲ್ಲಿಸುವುದನ್ನು ಪರಿಗಣಿಸುವ ಹಂತಗಳಾಗಿವೆ. ಮೇಲಿನ ಸದರಿ ಪ್ರಕರಣದಲ್ಲಿ ವಿಧಿಸಲಾದ ತತ್ವಕ್ಕೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಮೇರೆಗೆ ಅನುಸರಿಸಬೇಕಾದ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯಾವುದೇ ವಿವಾದವಿಲ್ಲ.

5. ಅಲ್ಲದೆ, ಅವರು, 111ನೇ ಕಂಡಿಕೆಯಲ್ಲಿನ ವರದಿಯಾದ ***ಲಲಿತಾ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು*** [2] ಪ್ರಕರಣದಲ್ಲಿ ವರದಿಯಾದ ಇನ್ನೊಂದು ತೀರ್ಪನ್ನು ಅವರು ಅವಲಂಬಿಸಿದ್ದು, ಇದು ಈ ಮುಂದಿನಂತೆ ನಿರ್ಣಯಿಸಿದೆ:

> (i) ಅಪರಾಧದ ಸಂಜ್ಞೇಯತೆ ಆಗಿರುವುದನ್ನು ಮಾಹಿತಿಯು ಪ್ರಕಟಪಡಿಸಿದರೆ, ಸಂಹಿತೆಯ 154ನೇ ಪ್ರಕರಣದ ಮೇರೆಗೆ ಪ್ರಥಮ ಮಾಹಿತಿ ವರದಿಯು ನೋಂದಣಿಯು ಕಡ್ಡಾಯವಾಗಿರುತ್ತದೆ ಮತ್ತು ಅಂಥ ಸನ್ನಿವೇಶದಲ್ಲಿ ಪ್ರಾರಂಭಿಕ ವಿಚಾರಣೆಯು ಅನುಮತೀಯವಾಗಿರುವುದಿಲ್ಲ, ಮತ್ತು

1. (2011) 3 ಎಸ್‌ಸಿಸಿ 758
2. 2013 (8) ಸುಪ್ರೀಂ 1

(ii) ಸ್ವೀಕರಿಸಿದ ಮಾಹಿತಿಯು ಅಪರಾಧದ ಸಂಜ್ಞೇಯತೆಯನ್ನು ಪ್ರಕಟಪಡಿಸದಿದ್ದಲ್ಲಿ, ಆದರೆ, ವಿಚಾರಣೆಯ ಅಗತ್ಯವನ್ನು ಸೂಚಿಸಿದರೆ, ಪ್ರಾರಂಭಿಕ ವಿಚಾರಣೆಯನ್ನು, ಅಪರಾಧ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಲು ಮಾತ್ರ ನಡೆಸಬಹುದಾಗಿದೆ.

ಅಲ್ಲದೆ, ವಿಚಾರಣೆಯು ಅಪರಾಧದ ಸಂಜ್ಞೇಯತೆಯನ್ನು ಪ್ರಕಟಪಡಿಸಿದರೆ, ಅಪರಾಧವನ್ನು ದಾಖಲು ಮಾಡಲೇಬೇಕು. ಅಪರಾಧದ ಸಂಜ್ಞೇಯತೆಯು ಪ್ರಕಟವಾದರೆ ಪೊಲೀಸು ಅಧಿಕಾರಿಯು ಪ್ರಕರಣವನ್ನು ದಾಖಲು ಮಾಡುವ ಅವನ ಕರ್ತವ್ಯವನ್ನು ತಪ್ಪಿಸಲು ಸಾಧ್ಯವಿಲ್ಲ. ಅವನು ಸ್ವೀಕರಿಸಿದ ಮಾಹಿತಿಯು ಅಪರಾಧದ ಸಂಜ್ಞೇಯತೆಯನ್ನು ಪ್ರಕಟಪಡಿಸಿದರೆ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸದಿರುವ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮವನ್ನು ಕೈಗೊಳ್ಳಲೇಬೇಕು. ಪ್ರಾರಂಭಿಕ ವಿಚಾರಣೆಯ ವ್ಯಾಪ್ತಿಯು ಸ್ವೀಕರಿಸಿದ ಮಾಹಿತಿಯ ಸತ್ಯಾಸತ್ಯತೆಯನ್ನು ಅಥವಾ ಅನ್ಯಥಾ ಪರಿಶೀಲಿಸಲು ಇರುವುದಿಲ್ಲವೆಂದು ಸಹ ತೀರ್ಮಾನಿಸಿದ್ದು, ಆದರೆ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ಮಾಹಿತಿಯು ವಿವರಿಸುತ್ತದೆಯೇ ಎಂಬುದನ್ನು ಸ್ಪಷ್ಟಪಡಿಸಲು ಮಾತ್ರವಾಗಿದೆಯೆಂದು ಅಭಿಪ್ರಾಯಪಟ್ಟಿರುತ್ತದೆ. ಅಂಥ ಪ್ರಾರಂಭಿಕ ವಿಚಾರಣೆಯನ್ನು ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನಾಧರಿಸಿ ನಡೆಸಬೇಕಾಗುತ್ತದೆಯೆಂದು ನ್ಯಾಯಾಲಯವು ಸಹ ಅಭಿಪ್ರಾಯಪಟ್ಟಿದೆ. ಯಾವ ಪ್ರಕರಣಗಳ ಪ್ರವರ್ಗಕ್ಕೆ ಪ್ರಾರಂಭಿಕ ವಿಚಾರಣೆಯನ್ನು ಮಾಡಬಹುದಾಗಿದೆಯೋ ಅವುಗಳನ್ನು ಸಹ ನಮೂದಿಸಲಾಗಿದೆ. ಆ ಪ್ರವರ್ಗದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಭ್ರಷ್ಟಾಚಾರ ಪ್ರಕರಣವನ್ನು ಸಹ ಸೇರಿಸಿದೆ.

6. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ***ಎಲ್. ಶಂಕರ್ ಮೂರ್ತಿ ಮತ್ತು ಇತರರು –ವಿರುದ್ಧ– ರಾಜ್ಯ ಲೋಕಾಯುಕ್ತ ಪೊಲೀಸ್*** [3] ವರದಿಯಾದ ಮತ್ತೊಂದು ನಿರ್ಣಯವನ್ನು ಸಹ ಅವಲಂಬಿಸಿದ್ದು,

3. 2012 (5) ಕೆಎಲ್‌ಜೆ 545(ಕಂಡಿಕೆ 35)

ಇದರಲ್ಲಿ, ನ್ಯಾಯಾಲಯವು, ತನಿಖೆಯನ್ನು ಕೈಗೊಳ್ಳಲು ವ್ಯವಹರಣೆ ನಡೆಸುವ ಮುಂಚೆ ಸ್ವೀಕರಿಸಿದ ಮಾಹಿತಿಯ ಮೇಲೆ ಪ್ರಕರಣವನ್ನು ದಾಖಲಿಸುವುದು ಅತ್ಯಗತ್ಯವಾಗಿರುತ್ತದೆಯೆಂದು ಅಭಿಪ್ರಾಯಪಟ್ಟಿದೆ. ಇದನ್ನು ಪಾಲಿಸದ ಸಂಬಂಧಪಟ್ಟ ಪೋಲೀಸು ಅಧಿಕಾರಿಯು ಕಾನೂನಿನ ಪ್ರಕ್ರಿಯೆಯನ್ನು ನಿಂದನೆಗೆ ಕಾರಣನಾಗುವನು ಮತ್ತು ಸಂಪೂರ್ಣ ವ್ಯವಹರಣೆಗಳು ದೂಷಿತವಾಗುವುವು. ***ಗಿರೀಶ್ ಚಂದ್ರ ಮತ್ತು ಇನ್ನೊಬ್ಬರು –ವಿರುದ್ಧ– ರಾಜ್ಯ ಪೊಆೀಸು ಲೋಕಾಯುಕ್ತ, ಯಾದಗಿರಿ***[4] ವರದಿಯಾದ ನಿರ್ಣಯದಲ್ಲಿ ಇದೇ ತತ್ವವನ್ನು ತಿಳಿಸಲಾಗಿದೆ. ಈ ಎರಡು ನಿರ್ಣಯಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಕೈಗೆತ್ತಿಕೊಂಡಿದ್ದು, ಸರ್ವೋಚ್ಚ ನ್ಯಾಯಾಲಯವು ಈ ನ್ಯಾಯಾಲಯದ ಸದರಿ ನಿರ್ಣಯಗಳನ್ನು ಸಹ ಸ್ಥಿರಗೊಳಿಸಿದೆ.

7. ಮೇಲಿನ ಸದರಿ ನಿರ್ಣಯಗಳನ್ನು ಆಧರಿಸಿ, ಪೊಲೀಸು ಅಧೀಕ್ಷಕರು, ಲೋಕಾಯುಕ್ತ, ಚಿತ್ರದುರ್ಗ ಜಿಲ್ಲೆ ಇವರು ಎಡಿಜಿಪಿಯವರು ನೀಡಿದ ಮಾಹಿತಿಯಲ್ಲಿ ಸಂಜ್ಞೇಯ ಅಪರಾಧವನ್ನು ಪ್ರಕಟಪಡಿಸಿದ್ದರೂ ಕೂಡ ತನಿಖೆಗೆ ಮೊದಲು ಪ್ರಕರಣವನ್ನು ದಾಖಲಿಸತಕ್ಕದ್ದಲ್ಲವೆಂದು ಮಾನ್ಯ ವಕೀಲರು ಗಂಭೀರವಾಗಿ ನಿವೇದಿಸಿದ್ದಾರೆ. ಆದರೆ ಇನೋವಾದ ಕಾರು ಸಂ.ಕೆಎ –01/ಜಿ – 4572ರಲ್ಲಿದ್ದ ಮೊತ್ತವನ್ನು ಹುಡುಕಿ, ಸ್ವಾಧೀನತೆ ಪಡೆದುಕೊಳ್ಳುವ ಮೂಲಕ ಅವನು ತನಿಖೆಯನ್ನು ನಡೆಸಿದ್ದಾನೆ ಮತ್ತು ಆಪಾದಿತನನ್ನು ಬಂಧಿಸಿ ಪ್ರಕರಣವನ್ನು ದಾಖಲಿಸಲು ಪೊಲೀಸು ಉಪ–ಅಧೀಕ್ಷಕರ ಮುಂದೆ ಅವನನ್ನು ಹಾಜರುಪಡಿಸಿದ್ದು, ಕಾನೂನು ಸಮ್ಮತವಾಗಿರುವುದಿಲ್ಲ. ಆದುದರಿಂದ ಇದು ರದ್ದುಗೊಳಿಸಲು ತಕ್ಕುದ್ದಾಗಿರುತ್ತದೆಯೆಂದು ನಿವೇದಿಸಿದ್ದಾರೆ.

8. ಮತ್ತೊಂದು ಕಡೆ, ಎದುರುದಾರರ ಪರವಾದ ಮಾನ್ಯ ವಕೀಲರು, **ಲಅತಾ ಕುಮಾರಿ**ಯವರ ಪ್ರಕರಣವನ್ನು ದೃಷ್ಟಿಯಲ್ಲಿಟ್ಟುಕೊಂಡು (ಮೇಲೆ ಗಮನಿಸಲಾದ) ತನಿಖಾಧಿಕಾರಿಗೆ ಅಥವಾ ಯಾವುದೇ ಸಂಜ್ಞೇಯ ಅಪರಾಧ ನಡೆದಿದೆಯೇ ಎಂಬ ಬಗ್ಗೆ ಕೆಲಸವನ್ನು ವಹಿಸಿರುವ ವ್ಯಕ್ತಿಗೆ ಯಾವುದೇ ಸಂಶಯ

4. 2013 (5) ಕೆಎಲ್‌ಜೆ 470 (ವಿಭಾ)

ಉಂಟಾದರೆ ಪ್ರಾರಂಭಿಕ ವಿಚಾರಣೆಯನ್ನು ನಡೆಸಬಹುದು. ಅಥವಾ ದೃಢವಾದರೆ ಪ್ರಾರಂಭಿಕ ವಿಚಾರಣೆಯನ್ನು ನಡೆಸದಿರುವಾಗ ಕೆಲವು ಅಪರಾಧ ನಡೆದಿರುವ ವಾಹನವನ್ನು ಶೋಧಿಸಿ, ವಶಪಡಿಸಿಕೊಂಡ ನಂತರ ಅವನು ಅಂಥ ಪ್ರಾರಂಭಿಕ ವಿಚಾರಣೆಯನ್ನು ನಡೆಸಬಹುದು, ಇದಾದ ನಂತರ ದೂರನ್ನು ದಾಖಲು ಮಾಡಬಹುದು. ಎಲ್ಲಾ ಪ್ರಕರಣಗಳಲ್ಲಿ ಪ್ರಾರಂಭಿಕ ವಿಚಾರಣೆ ಸಮ್ಮತವಾಗಿರುವುದಿಲ್ಲವೆಂದಲ್ಲ. ಇವೆಲ್ಲಾ ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಅವಲಂಬಿಸಿವೆಯೆಂದು ಅವರು ನಿವೇದಿಸಿದ್ದಾರೆ. ಈ ಸಂಬಂಧದಲ್ಲಿ, ಅವರು ***ರಂಗನಾಥ್ –ವಿರುದ್ಧ– ಕರ್ನಾಟಕ ರಾಜ್ಯ*** [5] ವರದಿಯಾದ ಈ ನ್ಯಾಯಾಲಯವು ಸಲ್ಲಿಸಿದ ನಿರ್ಣಯವನ್ನು ಸಹ ಅವಲಂಬಿಸಿದ್ದು, ಇದರಲ್ಲಿ ಈ ನ್ಯಾಯಾಲಯವು, ಎಲ್ಲಾ ಸಂದರ್ಭಗಳಲ್ಲಿ ಪ್ರಾರಂಭಿಕ ವಿಚಾರಣೆ ಸಮ್ಮತವಲ್ಲವೆಂದಲ್ಲ. ಇವೆಲ್ಲವು ಪ್ರತಿಯೊಂದು ಪ್ರಕರಣದ ಸಂಗತಿಗಳು ಸನ್ನಿವೇಶಗಳನ್ನು ಅವಲಂಬಿಸಿರುತ್ತದೆಯೆಂದು ಅಭಿಪ್ರಾಯಪಟ್ಟಿದೆಯೆಂದು ನಿವೇದಿಸಿದ್ದಾರೆ.

9. ಮಾನ್ಯ ವಕೀಲರು ಕ್ರಿಮಿನಲ್ ಅರ್ಜಿ ಸಂ.7053/2013ರಲ್ಲಿ ಈ ನ್ಯಾಯಾಲಯದ ಇನ್ನೊಂದು ತೀರ್ಪನ್ನೂ ಸಹ ಅವಲಂಬಿಸಿದ್ದು, ಇದರಲ್ಲಿ, ಈ ನ್ಯಾಯಾಲಯವು, ಶೋಧನೆಗೆ ಮೊದಲು ಪ್ರಥಮ ಮಾಹಿತಿ ವರದಿಯನ್ನು ದಾಖಲು ಮಾಡಿಲ್ಲದಿರುವ ಕಾರಣದಿಂದ ಸಂಪೂರ್ಣ ವಿಚಾರಣೆಯು ದೂಷಿತವಲ್ಲವೆಂದು ಅಭಿಪ್ರಾಯಪಟ್ಟಿದೆ ಮತ್ತು ಅಂಥ ವ್ಯವಹರಣೆಗಳಿಗೆ ಮೊದಲು ಮಾಡಲಾದ ಸಾಮಾನ್ಯ ಡೈರಿಯ ನಮೂದುಗಳನ್ನು, ಪ್ರಥಮ ಮಾಹಿತಿ ವರದಿಯೆಂದು ಪರಿಭಾವಿಸಬಹುದೆಂದು ನಿವೇದಿಸಿದ್ದಾರೆ.

10. ಪ್ರಕರಣದ ಸಂಗತಿಗಳನ್ನು ಮೇಲೆ ಟಿಪ್ಪಣಿ ಮಾಡಲಾದ ನಿರ್ಣಯಗಳನ್ನು ಪರಿಗಣನೆಗೆ ತೆಗೆದುಕೊಂಡು, ನನ್ನ ಸಂಪೂರ್ಣ ಕಾಳಜಿಯುಕ್ತ ಪರಿಗಣನೆಯನ್ನು ನೀಡಿದ ನಂತರ ಪೊಲೀಸು ಅಧೀಕ್ಷಕ ಲೋಕಾಯುಕ್ತ, ಚಿತ್ರದುರ್ಗ ಇವರು ಪ್ರಾರಂಭಿಕ ವಿಚಾರಣೆಯನ್ನು ನಡೆಸಿದ್ದಾರೆಯೇ ಅಥವಾ ಇದು ದೃಢಪಡಿಸುವ

5. ಕೆಸಿಸಿಆರ್ 2015 ಭಾಗ–II 1655

ಪ್ರಾರಂಭಿಕ ವಿಚಾರಣೆ ಮಾತ್ರವಾಗಿದೆಯೇ ಯಾವುದೇ ಸಂಜ್ಞೇಯ ಅಪರಾಧ ನಡೆದಿದೆಯೇ ಈ ನಿರ್ದಿಷ್ಟ ಪ್ರಕರಣವು, ತನಿಖೆಗೆ ಕಾರಣವಾಗುತ್ತದೆಯೆ ಮತ್ತು ಎಡಿಜಿಪಿಯು ನೀಡಿದ ಮೊದಲಿನ ಮಾಹಿತಿಯು ಯಾವುದೇ ಸಂಜ್ಞೇಯ ಅಪರಾಧವನ್ನು ಪ್ರಕಟಿಸಿಲ್ಲವೆ ಎಂಬುದನ್ನು ಈಗ ನಾನು ಪರಿಶೀಲಿಸಬೇಕು. ಆದುದರಿಂದ, ಸದರಿ ಮಾಹಿತಿಯ ಸತ್ಯಾಸತ್ಯತೆಯನ್ನು ಮತ್ತು ಯಾವುದೇ ಸಂಜ್ಞೇಯ ಅಪರಾಧ ನಡೆದಿದೆಯೇ ಎಂಬುದನ್ನು ಮತ್ತು ಅಂಥ ವ್ಯವಹರಣೆಗಳು ಯಾವುದೇ ಕಾನೂನುಬಾಹಿರತೆ ಮೂಲಕ ದೂಷಿತವಾಗಿವೆಯೇ ಎಂಬುದನ್ನು ಮತ್ತೆ ಸ್ಪಷ್ಟಪಡಿಸಲು ಪೊಲೀಸು ಅಧೀಕ್ಷಕ, ಲೋಕಾಯುಕ್ತ, ಚಿತ್ರದುರ್ಗ ಇವರು ಇದನ್ನು ಮಾಡಿದ್ದಾರೆ ಮತ್ತು ಇದಾದ ನಂತರ, ಪ್ರಕರಣವನ್ನು ನೋಂದಾಯಿಸಲು ಪೊಲೀಸು ಅಧೀಕ್ಷಕರನ್ನು ಅವರು ಕೋರಿದ್ದಾರೆ.

11. ಮೇಲಿನ ಸದರಿ ನಿರ್ಣಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ವಿಚಾರಣಾ ಅಧಿಕಾರಿಯು ಅಥವಾ ತನಿಖಾ ಅಧಿಕಾರಿಯು ಯಾವುದೇ ಮಾಹಿತಿಯನ್ನು ದೂರು ಅಥವಾ ಪ್ರಥಮ ಮಾಹಿತಿ ವರದಿಯನ್ನು ಸ್ವೀಕರಿಸಿರುವರು ಎಂಬುದು ಸಾಕಷ್ಟು ಮಟ್ಟಿಗೆ ಸ್ಪಷ್ಟವಾಗುತ್ತದೆ. ಇದನ್ನು ಸಾದಾ ರೀತಿಯಲ್ಲಿ ಓದಿದ ಮೇಲೆ, ಇದು ಯಾವುದೇ ಸಂಜ್ಞೇಯ ಅಪರಾಧವನ್ನು ಪ್ರಕಟಪಡಿಸಿದರೆ, ಆಗ, ದಂಡ ಪ್ರಕ್ರಿಯಾ ಸಂಹಿತೆಯ 154ನೇ ಪ್ರಕರಣದ ಮೇರೆಗೆ ಪ್ರಕರಣವನ್ನು ದಾಖಲಿಸುವುದು ಪೊಲೀಸು ಅಧಿಕಾರಿಯ ಬದ್ಧ ಕರ್ತವ್ಯ ಆಗಿರುತ್ತದೆ. ಒಂದು ಪಕ್ಷ ಸಂಗತಿಗಳು ಸ್ಪಷ್ಟವಾಗದಿದ್ದರೆ, ಆದರೆ ಅವುಗಳು ಅಸ್ಪಷ್ಟವಾಗಿದ್ದು ಸಂಪೂರ್ಣವಾಗಿ ಮಾಡಿರದಿದ್ದರೆ ಮತ್ತು ಯಾವುದೇ ಗೊಂದಲವಿದ್ದರೆ, ಅಧಿಕಾರಿಯು, ಪ್ರಕರಣವನ್ನು ನೋಂದಾಯಿಸುವ ಸಲುವಾಗಿ ವಾಸ್ತವವಾಗಿ ಸಂಜ್ಞೇಯವಾದ ಅಪರಾಧವು ನಡೆದಿರುವುದನ್ನು ತಾನೇ ಮನದಟ್ಟು ಮಾಡಿಕೊಳ್ಳುವ ಸಲುವಾಗಿ ಪ್ರಾರಂಭಿಕ ವಿಚಾರಣೆಯನ್ನು ಉತ್ತಮವಾಗಿ ಮಾಡಬಹುದು. ಅಂಥ ಕಟ್ಟಕಡೆಯ ಸನ್ನಿವೇಶದಲ್ಲಿ, ಅವನು ವಿಚಾರಣೆಯನ್ನು ಮುಂದುವರಿಸಬಹುದು ಮತ್ತು ಯಾವುದೇ ರೀತಿಯ ಕಲ್ಪನೆಯ ವಿಸ್ತಾರದಲ್ಲಿ ಅಂಥ ಪ್ರಾರಂಭಿಕ ವಿಚಾರಣೆಯನ್ನು ಅಧಿಕಾರಿಯು ಪ್ರಾರಂಭಿಕ ತನಿಖೆಯೆಂದು ಕರೆಯಬಹುದು. ನ್ಯಾಯಾಲಯವು, ಭ್ರಷ್ಟಾಚಾರದ ಪ್ರಕರಣವನ್ನು ವ್ಯವಹರಿಸುವಾಗ,

ಮನಸ್ಸಿನಲ್ಲಿಟ್ಟುಕೊಳ್ಳಬೇಕು ಮತ್ತು ಇದು ಕ್ಯಾನ್ಸರ್ ಕಾಯಿಲೆಯಂತೆ ಹರಡುತ್ತಿದ್ದು ಸಮಾಜದ ಮೇಲೆ ಅದರ ಪರಿಣಾಮ ಬೀರುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು, ನ್ಯಾಯಾಲಯವು ಅಂಥ ವ್ಯವಹರಣೆಗಳನ್ನು ರದ್ದುಗೊಳಿಸಲು ಪ್ರಸ್ತಾವಿಸುವ ಮೊದಲು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡುವಲ್ಲಿ ನ್ಯಾಯಾಲಯವು ತುಂಬಾ ಎಚ್ಚರಿಕೆಯಿಂದಿರಬೇಕು ಮತ್ತು ಜಾಗರೂಕವಾಗಿರಬೇಕು. ವ್ಯವಹರಣೆಗಳು ತುಂಬಾ ದೂಷಿತವಾಗಿವೆಯೇ ಮತ್ತು ತನಿಖಾ ಏಜೆನ್ಸಿ ಅಥವಾ ವಿಚಾರಣಾ ಏಜೆನ್ಸಿಯು ಎಸಗಿದ ಕ್ರಮದೋಷವು ಆಪಾದಿತನ ಪೂರ್ವಾಗ್ರಹಗಳ ಕ್ರಮದೋಷಕ್ಕೆ ಕಾರಣವಾಗಿವೆಯೇ ಮತ್ತು ಇದು ಯಾವುದೇ ನ್ಯಾಯ ತಪ್ಪುವಿಕೆಗೆ ಕಾರಣವಾಗಿದೆಯೇ ಎಂಬುದನ್ನು ಸ್ಪಷ್ಟಪಡಿಸಲು ನ್ಯಾಯಾಲಯವು ಜಾಗೃತಿ ವಹಿಸಬೇಕು. ಆಗ ಅಂಥ ವ್ಯವಹರಣೆಗಳನ್ನು ರದ್ದುಗೊಳಿಸಲು ತಕ್ಕುದಾಗಿರುತ್ತದೆ. ವಿಚಾರಣೆಯಲ್ಲಿ ಅಥವಾ ಪ್ರಕರಣದ ನೋಂದಣಿಯಲ್ಲಿ ಅಥವಾ ವಿಷಯದ ತನಿಖೆಯಲ್ಲಿನ ಕೆಲವು ಕ್ರಮದೋಷ ಮಾತ್ರದಿಂದಲೇ ಅಂಥ ವ್ಯವಹರಣೆಗಳು, ಆಪಾದಿತನು ಪ್ರತಿಕೂಲವಾಗಿರುವನೆಂದು ಹಸ್ತಕ್ಷೇಪ ಮಾಡಲು ಅದು ಆಗುವುದಿಲ್ಲವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಸಾದಾ ಆಗಿ ಓದುವುದರಿಂದ ಪ್ರಕರಣದ ಸಂಗತಿಗಳು ಅರ್ಥವಾಗುತ್ತಿದ್ದರೆ ತನಿಖೆಯ ವ್ಯವಹರಣೆಗೆ ಮೊದಲು ಪ್ರಕರಣವನ್ನು ದಾಖಲಿಸಲು ಅಧಿಕಾರಿಗೆ ಅನಿವಾರ್ಯತೆ ಸಂಭವಿಸಿರುವ ಹಾಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಯಾವುದೇ ಅಪರಾಧವನ್ನು ರೂಪಿಸುವ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಸಂದೇಹವಿರುವುದಿಲ್ಲ. ಸಂದೇಹದ ಯಾವುದೇ ಹೋಲಿಕೆಗಳು ಸೃಷ್ಟಿಯಾಗಿದ್ದರೆ, ವಿಷಯವನ್ನು ವಿಚಾರಣೆ ಮಾಡುವ ವ್ಯಕ್ತಿಯ ಹೆಸರಿನಲ್ಲಿ ಪ್ರಾರಂಭಿಕ ಹಂತಗಳಲ್ಲಿ ಸಂದೇಹದ ಲಾಭವನ್ನು ನೀಡಬೇಕು. ಆದುದರಿಂದ, ಈ ಹಿನ್ನೆಲೆಯಲ್ಲಿ ಸದರಿ ಮೇಲಿನ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಈ ನ್ಯಾಯಾಲಯವು, ಈ ಪ್ರಕರಣದ ವಾಸ್ತವಿಕ ವಿಷಯವನ್ನು ದೃಢೀಕರಿಸಬೇಕೆಂದು ಅವರು ನಿವೇದಿಸಿದ್ದಾರೆ.

12. ಈಗ ಎಡಿಜಿಪಿಯವರು ನೀಡಿದ ಮಾಹಿತಿಗೆ ವಾಪಸ್ಸು ಬರುವುದಾದರೆ, ಆಪಾದಿತ ಪ್ರಾರಂಭಿಕ ವಿಚಾರಣೆಯನ್ನು ಪೊಲೀಸು ಅಧೀಕ್ಷಕ ಲೋಕಾಯುಕ್ತರವರು

ನಡೆಸಿದ್ದಾರೆ. ಪ್ರಥಮ ಮಾಹಿತಿ ವರದಿಯಲ್ಲಿ, ದಿನಾಂಕ 7.5.2015ರಂದು ಬೆಳಿಗ್ಗೆ ಪೊಲೀಸು ಅಧೀಕ್ಷಕ ಲೋಕಾಯುಕ್ತ, ಚಿತ್ರದುರ್ಗ ಇವರು ಇನೋವಾ ಕಾರಿನಲ್ಲಿ ಅಪಾರ ಮೊತ್ತವನ್ನು ಸಾಗಿಸಲಾಗುತ್ತಿದೆಯೆಂಬದು ಹೇಳಿದ ನಿರ್ದೇಶನವನ್ನು ಲೋಕಾಯುಕ್ತ ಎಡಿಜಿಪಿ, ಬೆಂಗಳೂರು ಇವರಿಂದ ಪಡೆದುಕೊಂಡಿದ್ದಾರೆ. ಆದುದರಿಂದ ಎಡಿಜಿಪಿಯವರು ಯುಕ್ತಕ್ರಮವನ್ನು ಕೈಗೊಳ್ಳಲು ಪೊಲೀಸು ಅಧೀಕ್ಷಕ ಲೋಕಾಯುಕ್ತ ಇವರಿಗೆ ಸೂಚಿಸಿದ್ದಾರೆ. ಈ ಆವೃತ್ತಿಯನ್ನು ಹೊರತುಪಡಿಸಿ, ಪ್ರಥಮ ಮಾಹಿತಿ ವರದಿಯಲ್ಲಿ ಒಂದನ್ನು ಸೂಚಿಸಿರುವುದನ್ನು ಹೊರತುಪಡಿಸಿದರೆ, ಪೊಲೀಸು ಅಧೀಕ್ಷಕರು ಲೋಕಾಯುಕ್ತ ಇವರು ಸ್ವೀಕರಿಸಿದ ಮಾಹಿತಿಯು ಖಚಿತವಾಗಿ ಏನು ಎಂಬುದು ಕಂಡುಬರುವುದಿಲ್ಲ. ಆದುದರಿಂದ, ಲೋಕಾಯುಕ್ತ ಎಡಿಜಿಪಿಯವರು ನೀಡಿದ ಸೂಚನೆಯು ಈ ನಿರ್ದಿಷ್ಟಭಾಗ, ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡಲ್ಲಿ, ಅಂಥ ಮಾಹಿತಿಯು, ಯಾವುದೇ ಸಂಜ್ಞೇಯ ಅಪರಾಧಕ್ಕಿಂತ ಹೆಚ್ಚಿನ ಯಾವುದೇ ಅಪರಾಧವನ್ನು ಬಹಿರಂಗಗೊಳಿಸುವುದಿಲ್ಲ. ವಾಹನದಲ್ಲಿ ಅಪಾರ ಮೊತ್ತದ ಹಣವನ್ನು ಸಾಗಿಸುತ್ತಿರುವ ಮಾತ್ರಕ್ಕೆ ಸಂಜ್ಞೇಯ ಅಪರಾಧ ಅಥವಾ ಯಾವುದೇ ಅಪರಾಧದ ಸಮನಾಗುವುದಿಲ್ಲ. ಸದರಿ ಮೊತ್ತವನ್ನು ವಿವರಿಸಲಾಗದ ಮೊತ್ತವೆಂದು ತೋರಿಸುತ್ತಿದ್ದರೆ ಅಥವಾ ಯಾವುದೇ ಕಾನೂನುಬಾಹಿರ ಚಟುವಟಿಕೆಯ ಉದ್ದೇಶಕ್ಕೆ ಸಾಗಿಸುತ್ತಿದ್ದರೆ ಆಗ ಮಾತ್ರ ಅದು ಸಂಜ್ಞೇಯ ಅಪರಾಧಕ್ಕೆ ಸಮನಾಗಿದ್ದು ಅದನ್ನು ಪೊಲೀಸು ಅಧಿಕಾರಿಯು ಗಮನಕ್ಕೆ ತೆಗೆದುಕೊಳ್ಳಬಹುದು. ಆದುದರಿಂದ, ಅಂಥ ಮಾಹಿತಿಯು ಸಮುಚಿತವಾಗಿದೆಯೇ ಮತ್ತು ಸರಿಯಾಗಿದೆಯೇ ಮತ್ತು ವಾಹನದಲ್ಲಿ ಹಣವನ್ನು ಸಾಗಿಸುತ್ತಿರುವುದು ಯಾವುದೇ ಅಪರಾಧಕ್ಕೆ ಕಾರಣವಾಗುತ್ತದೆಯೇ ಮತ್ತು ಸಂಜ್ಞೇಯ ಅಪರಾಧಕ್ಕೆ ಕಾರಣವಾಗಿರುವುದನ್ನು ದೃಢಪಡಿಸಲು ವಿಷಯವನ್ನು ವಿಚಾರಣೆ ಮಾಡುವ ಸಲುವಾಗಿ ಪ್ರಾರಂಭಿಕ ವಿಚಾರಣೆ ಮಾಡಲು ಪೊಲೀಸು ಅಧೀಕ್ಷಕರು ಮುಂದಾಗಿದ್ದಾರೆ.

13. ಪ್ರಥಮ ಮಾಹಿತಿ ವರದಿಯಲ್ಲಿ, ಆ ನಿರ್ದಿಷ್ಟ ಸ್ಥಳವನ್ನು ತಲುಪಿದ ನಂತರ, ಪೊಲೀಸು ಅಧೀಕ್ಷಕ ಲೋಕಾಯುಕ್ತ ಇವರು, ಸದರಿ ವಾಹವನನ್ನು ಅಡ್ಡಗಟ್ಟಿ, ಸದರಿ ವಾಹನದಲ್ಲಿ 36,85,500/- ರೂ.ಗಳು ಕಂಡು ಬಂದಿತ್ತೆಂದು

ಮತ್ತು ಸದರಿ ವಾಹನದಲ್ಲಿದ್ದ ಆಪಾದಿತ ಅರ್ಜಿದಾರರನ್ನು ಅಪಾರ ಮೊತ್ತದ ಹಣವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ವಿಚಾರಣೆ ಮಾಡಿದ್ದು, ಯಾವುದೇ ತೃಪ್ತಿಕರ ಉತ್ತರವನ್ನು ನೀಡದಿದ್ದುದರಿಂದ, ಆಗ ಸದರಿ ವಿಚಾರಣಾ ಅಧಿಕಾರಿಯು, ಯಾವುದೇ ಕಾನೂನುಬಾಹಿರ ಚಟುವಟಿಕೆಗಾಗಲಿ ಅಥವಾ ಲೋಕನೌಕರನಿಗೆ ವಿವರಿಸಲಾಗದ ಮೊತ್ತಕ್ಕೆ ಇದು ಕಾರಣವಾಗಿದೆಯೆಂಬ ನಿರ್ಣಯಕ್ಕೆ ಬಂದಿದ್ದು ಸದರಿ ಸ್ಥಳದಿಂದ ತಪ್ಪಿಕೊಳ್ಳಲು ಆಪಾದಿತನಿಗೆ ಯಾವುದೇ ಅವಕಾಶ ನೀಡದೆ ಮತ್ತು ಹಣದೊಂದಿಗೆ ಪೊಲೀಸರ ಹಿಡಿತದಿಂದ ತಪ್ಪಿಸಿಕೊಳ್ಳಲು ಸದರಿ ವ್ಯಕ್ತಿಗೆ ಅವಕಾಶಕೊಡದೆ, ವಿಚಾರಣಾ ಅಧಿಕಾರಿಯು ಸದರಿ ಮೊತ್ತವನ್ನು ಮತ್ತು ಆಪಾದಿತನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾನೆ. ಬಹುಶಃ ಅವನು, ಯಾವುದೇ ದಾಖಲೆಯಿಲ್ಲದೆ, ಅವನು, ವಾಹನವನ್ನು ಸ್ವಾಧೀನಪಡಿಸಿಕೊಳ್ಳಲು ಅಥವಾ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ, ಆ ಕಾರಣಕ್ಕಾಗಿ, ಅವನು ಮಹಜರನ್ನು ಮಾಡಿ ಹಣವನ್ನು ಮತ್ತು ವಾಹನವನ್ನು ವಶಕ್ಕೆ ತೆಗೆದುಕೊಂಡು ಕೂಡಲೇ ವಿಳಂಬ ಮಾಡದೆ ಲೋಕಾಯುಕ್ತ ಪೊಲೀಸರ ಬಳಿಗೆ ಹೋಗಿದ್ದಾನೆ ಮತ್ತು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದಾನೆ.

14. ಮೇಲಿನ ಸದರಿ ವಾಸ್ತವಿಕ ದೃಷ್ಟಿಕೋನಗಳನ್ನು ವಿಶ್ಲೇಷಿಸಿದ ನಂತರ ನನ್ನ ಅಭಿಪ್ರಾಯದಲ್ಲಿ ಪೊಲೀಸು ಅಧೀಕ್ಷಕರ ಸದರಿ ಕೃತ್ಯವು ಯಾವುದೇ ರೀತಿಯಲ್ಲಿ ತನಿಖೆಯ ಪ್ರವರ್ಗದ ಅಡಿಯಲ್ಲಿ ಬರುವುದಿಲ್ಲ ಆದರೆ ಪ್ರಾರಂಭಿಕ ತನಿಖೆಯಾಗುತ್ತದೆ. ತನಿಖಾಧಿಕಾರಿಯು ಮುಂದೆ ಈ ದಾಖಲೆಗಳನ್ನು ಹಾಜರುಪಡಿಸುವಾಗ ಮತ್ತು ಪ್ರಕರಣವನ್ನು ದಾಖಲಿಸಿದ ನಂತರ, ಅರ್ಜಿದಾರನು, ಅಂಥ ಅಪಾರ ಹಣವನ್ನು ಹೇಗೆ ಪಡೆದುಕೊಂಡ, ಇದು ಹೇಳಲಾಗದ ಮೊತ್ತವಾಗಿದೆಯೇ ಅಥವಾ ಅವನು ಲೋಕ ನೌಕರನಾಗಿ ತನ್ನ ಸೇವಾವಧಿಯಲ್ಲಿ ಸಂಪತ್ತನ್ನು ಕ್ರೋಢೀಕರಿಸಿದ್ದಾನೆಯೇ ಮತ್ತು ಈ ಮೊತ್ತವನ್ನು ಹೊರತುಪಡಿಸಿ ಇವನು ಸಂಪತ್ತನ್ನು ಸಂಗ್ರಹಿಸಿದ್ದಾನೆಯೇ ಮುಂತಾದವುಗಳ ಬಗ್ಗೆ ವಿಷಯವನ್ನು ವಿಚಾರಣೆ ಮಾಡಬೇಕಾಗುತ್ತದೆ. ತನಿಖೆಯನ್ನು ಮಾಡಬೇಕಾಗಿತ್ತು. ಏಕೆಂದರೆ,

ಅರ್ಜಿದಾರನು ಭ್ರಷ್ಟ ಸಂಪಾದನೆಯ, ಮೂಲಕ ಸದರಿ ಮೊತ್ತವನ್ನು ಸಂಪಾದಿಸಿರಬಹುದು ಎಂಬುದನ್ನು ಮತ್ತು ಅದನ್ನು ತನಿಖೆ ಮಾಡಬೇಕಾಗುತ್ತದೆಯೇ ಎಂಬುದನ್ನು ವಿಚಾರಣಾ ಅಧಿಕಾರಿಯು ಮನದಟ್ಟು ಮಾಡಿಕೊಂಡಿರುವುದನ್ನು ಪ್ರಥಮ ಮಾಹಿತಿ ವರದಿಯಲ್ಲೇ ಹೇಳಲಾಗಿದೆ. ಆದುದರಿಂದ, ಸಂಗತಿಗಳ ಮೇಲೆ ಪೊಲೀಸು ಅಧೀಕ್ಷಕರ ಮೇಲಿನ ಸದರಿ ಕೃತ್ಯವು ತನಿಖೆಗೆ ಕಾರಣವಾಗುತ್ತದೆಯೆಂಬ ನಿರ್ಣಯಕ್ಕೆ ಬರಲು ಯಾವುದೇ ಗಣನೀಯ ಕಾರಣಗಳು ನನಗೆ ಕಂಡುಬಂದಿಲ್ಲ.

15. ಮೇಲಿನ ಹಿನ್ನೆಲೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಬರುವ ಕೆಲವು ಸಂಬಂಧಪಟ್ಟ ಉಪಬಂಧಗಳನ್ನು ಪರಾಮರ್ಶಿಸುವುದು ಯೋಗ್ಯವಾದುದಾಗಿದ್ದು, ಇದರಲ್ಲಿ ಪೊಲೀಸರು, ಯಾವುದೇ ಅಪರಾಧದಲ್ಲಿನ ಆಪಾದಿತ ವ್ಯಕ್ತಿಗಳು ನಡೆಸಿದ ಮತ್ತು ಸಹಭಾಗಿಯಾಗಿರುವುದಕ್ಕೆ ಸಂಬಂಧಪಟ್ಟಂತೆ ಸಂದೇಹ ಬಂದಾಗ ವಾರಂಟಿಲ್ಲದೆ ವ್ಯಕ್ತಿಯನ್ನು ಶೋಧಿಸಬಹುದು, ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಬಂಧಿಸಬಹುದಾಗಿದೆ.

16. ದಂಡ ಪ್ರಕ್ರಿಯಾ ಸಂಹಿತೆಯ 41ನೇ ಪ್ರಕರಣವು, ವ್ಯಕ್ತಿಗಳನ್ನು ಬಂಧಿಸುವುದಕ್ಕೆ ಸಂಬಂಧಿಸಿದುದಾಗಿದೆ. 41(1)(ಎ) ಮತ್ತು (ಡಿ) ಪ್ರಕರಣವು, ಸಂಬಂಧಪಟ್ಟ ಉಪಬಂಧವಾಗಿದ್ದು, ಇದನ್ನು ಈ ನ್ಯಾಯಾಲಯವು ಪರಿಗಣಿಸಬೇಕಾಗಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

> *"41(1)ನೇ ಪ್ರಕರಣ (ಎ) ಯಾರು ಯಾವುದೇ ಸಂಜ್ಞೇಯ ಅಪರಾಧಕ್ಕೆ ಸಂಬಂಧಪಟ್ಟಿರುವರೋ ಆ ಪೊಲೀಸು ಅಧಿಕಾರಿಯ ಸಮ್ಮುಖದಲ್ಲಿ,*
>
> *(ಬಿ) ಯಿಂದ (ಸಿ) ವರೆಗೆ xxx xxx xxx xxx*

*(ಡಿ) ಕಳವು ಮಾಲೆಂದು ಸಕಾರಣವಾಗಿ ಸಂಶಯಪಡಬಹುದಾದ ಯಾವುದೇ ವಸ್ತುವು, ಯಾರ ಸ್ವಾಧೀನದಲ್ಲಿ ಕಂಡು ಬರುವುದೋ ಮತ್ತು ಯಾರು ಅಂಥ ವಸ್ತುವಿನ ಸಂಬಂಧದಲ್ಲಿ ಅಪರಾಧವನ್ನು ಮಾಡಿರುವುದಾಗಿ ಸಕಾರಣವಾಗಿ ಸಂಶಯಪಡಬಹುದೋ; ಅಥವಾ*

17. ಮೇಲಿನ ಸದರಿ ಪ್ರಕರಣವು ಅವು, ಔಪಚಾರಿಕ ಮತ್ತು ವಿಳಂಬವಿಲ್ಲದೆ ಸಂಜ್ಞೇಯ ಅಪರಾಧಗಳನ್ನು ತಡೆಯುವುದಕ್ಕಾಗಿ ಅಥವಾ ಪತ್ತೆ ಮಾಡುವುದಕ್ಕಾಗಿ ಅವರು ತ್ವರಿತವಾಗಿ ಕಾರ್ಯನಿರ್ವಹಿಸಬಹುದಾದ ಪೊಲೀಸರಿಗೆ ಸಂಬಂಧಿಸಿದ ತುಂಬಾ ವ್ಯಾಪಕ ಅಧಿಕಾರಗಳನ್ನು ಪ್ರದಾನ ಮಾಡಿದೆ. ಆದುದರಿಂದ ನ್ಯಾಯಾಲಯವು ಅಧಿಕಾರಗಳನ್ನು ವಿಶೇಷವಾಗಿ, ಸ್ವಂತಭಾವನೆಗಳ ತೃಪ್ತಿಗಾಗಿ ನಿಂದನೆಯ ಅಥವಾ ಹಗುರವಾಗಿ ಬಳಸುವ ರೀತಿಯಲ್ಲಿಲ್ಲವೆಂಬುದನ್ನು ವೀಕ್ಷಿಸಲು ಜಾಗರೂಕವಾಗಿರಬೇಕು. ಪ್ರಕರಣದಲ್ಲಿ ಪರಿಶೀಲಿಸಲಾದಂತೆ ನನ್ನ ಅಭಿಪ್ರಾಯದಲ್ಲಿ, ವ್ಯಕ್ತಿಗಳ ಬಂಧನ ಮತ್ತು ತಡೆಹಿಡಿಯುವಿಕೆಗೆ ಮತ್ತು ಪೊಲೀಸರು ಪತ್ತೆ ಮಾಡಿದ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 41ನೇ ಪ್ರಕರಣದ ಮೇರೆಗೆ ಅವರಿಗೆ ವಹಿಸಲಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ದುರುಪಯೋಗವಾಗಿಲ್ಲ. ಸಹಜವಾಗಿ ನ್ಯಾಯನಿರ್ಣಯ ಮಾಡದೆ ವ್ಯಕ್ತಿಯನ್ನು ಬಂಧಿಸುವುದು. ಅಂಥ ವ್ಯಕ್ತಿಯ ಸ್ವಾತಂತ್ರ್ಯದ ಮೇಲಿನ ಅತೀ ಗಂಭೀರವಾದ ಅತಿಕ್ರಮಣವಾಗುತ್ತದೆ. ವಾರಂಟಿಲ್ಲದೆ ಅವರು ಬಂಧಿಸಿದಾಗ, ಅಪರಾಧದ ಸಾಧ್ಯತೆಯನ್ನು ನೋಡಲು ತ್ವರಿತವಾಗಿರಬೇಕಾಗಿರುವುದು ಪೊಲೀಸರ ಕರ್ತವ್ಯ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ, ಆದರೆ, ಅದಕ್ಕೆ ಸಮಾನವಾಗಿ ಅವರು, ತಪ್ಪು ಮಾಡದ ಅಮಾಯಕನನ್ನು ತಪ್ಪು ತಿಳಿಯುವುದನ್ನು ತಪ್ಪಿಸಲು ಸಿದ್ಧರಾಗಿರಲೇಬೇಕು. ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳಲು ಅಥವಾ ಶೋಧಿಸಲು ಮತ್ತು ಅಭಿಗ್ರಹಿಸಲು ಪೊಲೀಸರಿಗೆ ನೀಡಲಾದ ಅಧಿಕಾರವು ವಿವೇಚನಾಯುಕ್ತವಾಗಿದೆ. ಆದಾಗ್ಯೂ, ಅತ್ಯಗತ್ಯತೆ ಮತ್ತು ಸನ್ನಿವೇಶಗಳ ಕಾರಣದಿಂದಾಗಿ, ಕೆಲವು ವಸ್ತುಗಳನ್ನು ಪೊಲೀಸು ಅಧಿಕಾರಿಯು ವಶಕ್ಕೆ

ತೆಗೆದುಕೊಂಡಿದ್ದರೆ ಮತ್ತು ಅಭಿಗ್ರಹಿಸಿದ್ದರೆ, ಕೆಲವು ತಪ್ಪು ತಿಳಿವಳಿಕೆಯಿದ್ದರೂ ಕೂಡ, ವ್ಯವಹರಣೆಗಳನ್ನು ಇದು ದೂಷಿಸುವುದಿಲ್ಲ ಆದರೆ, ಅವು ಮೇಲಿನ ಸದರಿ ಉಪಬಂಧಗಳ ಅಡಿಯಲ್ಲಿ ಬರುತ್ತವೆ.

18. ದಂಡ ಪ್ರಕ್ರಿಯಾ ಸಂಹಿತೆಯ 51ನೇ ಪ್ರಕರಣವು, ಸಂಹಿತೆಯ 41ನೇ ಪ್ರಕರಣದ ಮೇರೆಗೆ ವ್ಯಕ್ತಿಯನ್ನು ಬಂಧಿಸಿದರೆ ಪೊಲೀಸು ಅಧಿಕಾರಿಯು ಏನನ್ನು ಮಾಡಬೇಕು ಎಂಬುದಕ್ಕೆ ಸಂಬಂಧಪಟ್ಟಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

> *"51. ದಸ್ತಗಿರಿಯಾದ ವ್ಯಕ್ತಿಯ ಶೋಧನೆ.– (1) ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅವಕಾಶವಿರದ ವಾರಂಟಿನ ಮೇರೆಗೆ, ಅಥವಾ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅವಕಾಶವಿರುವ ವಾರಂಟಿನ ಮೇರೆಗೆ, ಆದರೆ, ದಸ್ತಗಿರಿಯಾದ ವ್ಯಕ್ತಿಯು, ಜಾಮೀನನ್ನು ಒದಗಿಸಲಾಗದೆ, ಪೊಲೀಸು ಅಧಿಕಾರಿಯಿಂದ ಒಬ್ಬ ವ್ಯಕ್ತಿಯು ದಸ್ತಗಿರಿಯಾದಾಗ, ಮತ್ತು*
>
> *<u>ವಾರಂಟಿಲ್ಲದೆ ವ್ಯಕ್ತಿಯು ದಸ್ತಗಿರಿಯಾದಾಗ ಅಥವಾ ವಾರಂಟಿನ ಮೇರೆಗೆ ಖಾಸಗಿ ವ್ಯಕ್ತಿಯಿಂದ ದಸ್ತಗಿರಿಯಾದಾಗ ಮತ್ತು ವಿಧಿಸಮ್ಮತವಾಗಿ ಜಾಮೀನಿನ ಮೇಲೆ ಬಿಡುಗಡೆ ಒದಗಿಸಲು ಸಾಧ್ಯವಾಗದಿದ್ದಾಗ,</u>*
>
> *ದಸ್ತಗಿರಿ ಮಾಡುವ ಅಧಿಕಾರಿಯು ಅಥವಾ ಖಾಸಗಿ ವ್ಯಕ್ತಿಯು ದಸ್ತಗಿರಿ ಮಾಡಿದಾಗ, ಯಾವ ಪೊಲೀಸು ಅಧಿಕಾರಿಗೆ ಒಪ್ಪಿಸಲಾಗಿದೆಯೋ ಆ ಅಧಿಕಾರಿಯು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಮತ್ತು ಅವನಲ್ಲಿ ದೊರೆತ ಅವಶ್ಯಕ ಉಡುಪನ್ನುಳಿದು ಎಲ್ಲಾ ವಸ್ತುಗಳನ್ನು ಸುರಕ್ಷಿತ*

*ಅಭಿರಕ್ಷೆಯಲ್ಲಿಡಬಹುದು ಮತ್ತು ದಸ್ತಗಿರಿಯಾದ ವ್ಯಕ್ತಿಯಿಂದ ಯಾವುದೇ ವಸ್ತುವನ್ನು ಅಭಿಗ್ರಹಿಸಲಾಗಿದ್ದರೆ, ಪೊಲೀಸು ಅಧಿಕಾರಿಯು ಸ್ವಾಧೀನಪಡಿಸಿಕೊಂಡ ವಸ್ತುಗಳನ್ನು ತೋರಿಸುವ ರಸೀತಿಯನ್ನು ಅಂಥ ವ್ಯಕ್ತಿಗೆ ಕೊಡತಕ್ಕದ್ದು.*

*(2) ಒಬ್ಬ ಸ್ತ್ರೀಯನ್ನು ಶೋಧನೆ ಮಾಡುವುದು ಅವಶ್ಯಕವಾದಾಗ, ಸಭ್ಯತೆಗೆ ಪೂರ್ಣ ಗಮನಕೊಟ್ಟು ಮತ್ತೊಬ್ಬ ಸ್ತ್ರೀಯು ಶೋಧನೆ ಮಾಡತಕ್ಕದ್ದು.*"

(ಒತ್ತು ನೀಡಲಾಗಿದೆ)

ನೋಡಬಹುದಾದಂತೆ 51(1)ನೇ ಪ್ರಕರಣ ಮೊದಲ ಭಾಗವು, ವ್ಯಕ್ತಿಯನ್ನು ದಸ್ತಗಿರಿ ಮಾಡಲು ತನ್ನೊಂದಿಗೆ ವಾರಂಟು ಹೊಂದಿರುವ ಪೊಲೀಸು ಅಧಿಕಾರಿಗೆ ಅಧಿಕಾರ ನೀಡುತ್ತದೆ. ಆದರೆ ಸದರಿ ಪ್ರಕರಣದ ಎರಡನೇ ಭಾಗವು, ಪೊಲೀಸು ಅಧಿಕಾರಿಯು ವಾರಂಟಿಲ್ಲದೆ ವ್ಯಕ್ತಿಯನ್ನು ದಸ್ತಗಿರಿ ಮಾಡಿದಾಗ ಜಾಮೀನಿನ ಮೇಲೆ ಬಿಡುಗಡೆ ಕಾನೂನುಬದ್ಧವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲದಿದ್ದಾಗ ಅಥವಾ ಜಾಮೀನು ನೀಡಲು ಆಗದಿದ್ದಾಗ, ಆಗ, ದಸ್ತಗಿರಿ ಮಾಡುವ ಅಂಥ ಅಧಿಕಾರಿಯು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಮತ್ತು ಅವನಲ್ಲಿ ದೊರೆತ ಅವಶ್ಯಕ ಉಡುಪುಗಳನ್ನುಳಿದು ಎಲ್ಲಾ ವಸ್ತುಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿಡುವುದು ಮತ್ತು ದಸ್ತಗಿರಿ ಮಾಡಲಾದ ವ್ಯಕ್ತಿಯಿಂದ ಅಂಥ ವಸ್ತುವನ್ನು ಅಭಿಗ್ರಹಿಸಿದ್ದರೆ, ಪೊಲೀಸು ಅಧಿಕಾರಿಯು ಸ್ವಾಧೀನಪಡಿಸಿಕೊಂಡ ವಸ್ತುಗಳನ್ನು ತೋರಿಸುವ ರಸೀದಿಯನ್ನು ಅಂಥ ವ್ಯಕ್ತಿಗೆ ನೀಡತಕ್ಕದ್ದು. ಆದುದರಿಂದ, ವಾರಂಟಿಲ್ಲದೆ ಪೊಲೀಸು ಅಧಿಕಾರಿಯು ವ್ಯಕ್ತಿಯನ್ನು ದಸ್ತಗಿರಿ ಮಾಡಿದಾಗ ಮತ್ತು ಯಾವುದೇ ಶೋಧನೆಯನ್ನು ಮಾಡಿದರೆ, ಆಗಲೂ ಸಹ ಅಂಥ ವಸ್ತುವನ್ನು ಸುರಕ್ಷಿತ ಅಭಿರಕ್ಷೆಯಲ್ಲಿಡುವುದು.

19. ಅಷ್ಟೇ ಅಲ್ಲದೆ, ಮೇಲೆ ಹೇಳಿರುವುದರ ಜೊತೆಗೆ, ವಾರಂಟಿಲ್ಲದೆ ವ್ಯಕ್ತಿಯನ್ನು ದಸ್ತಗಿರಿ ಮಾಡಿರುವ ಪೊಲೀಸು ಅಧಿಕಾರಿಯು, ಏನನ್ನು ಮಾಡಬೇಕು

ಎಂಬುದರ ಬಗ್ಗೆ ಮಾರ್ಗದರ್ಶನ ನೀಡುತ್ತದೆ. 56ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

> *"56ನೇ ಪ್ರಕರಣ. ದಸ್ತಗಿರಿಯಾದ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟ್ ಅಥವಾ ಪೊಲೀಸು ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು:– ವಾರಂಟಿಲ್ಲದೆ ದಸ್ತಗಿರಿ ಮಾಡುವ ಒಬ್ಬ ಪೊಲೀಸು ಅಧಿಕಾರಿಯು, ಅನವಶ್ಯಕ ವಿಳಂಬವಿಲ್ಲದೆ ಮತ್ತು ಜಾಮೀನಿಗೆ ಸಂಬಂಧಿಸಿದಂತೆ ಇದರಲ್ಲಿರುವ ಉಪಬಂಧಗಳಿಗೊಳಪಟ್ಟು ಮೊಕದ್ದಮೆಯ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನ ಅಥವಾ ಪೊಲೀಸು ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯ ಮುಂದೆ ದಸ್ತಗಿರಿಯಾದ ವ್ಯಕ್ತಿಯನ್ನು ಕರೆದೊಯ್ಯತಕ್ಕದ್ದು ಅಥವಾ ಕಳಿಸತಕ್ಕದ್ದು."*
>
> (ಒತ್ತು ನೀಡಲಾಗಿದೆ)

20. 41, 51 ಮತ್ತು 56ನೇ ಪ್ರಕರಣವನ್ನು ಒಟ್ಟಾಗಿ ಓದಿದ ಮೇಲೆ ವಾರಂಟು ಇಲ್ಲದಿರುವ ಪೊಲೀಸು ಅಧಿಕಾರಿಯು, ವ್ಯಕ್ತಿಯನ್ನು ದಸ್ತಗಿರಿ ಮಾಡಿದರೆ ಮತ್ತು ಕೆಲವು ವಸ್ತುಗಳನ್ನು ಅಭಿಗ್ರಹಿಸಲಾಗಿದ್ದರೆ, ಅನವಶ್ಯಕ ವಿಳಂಬ ಮಾಡದೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳಿಗೆ ಒಳಪಟ್ಟು ಮೊಕದ್ದಮೆಯ ಮೇಲೆ ಅಧಿಕಾರವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಪೊಲೀಸು ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯ ಮುಂದೆ ದಸ್ತಗಿರಿ ಮಾಡಲಾದ ಸದರಿ ವ್ಯಕ್ತಿಯನ್ನು ಕರೆದೊಯ್ಯತಕ್ಕದ್ದು ಅಥವಾ ಕಳಿಸತಕ್ಕದ್ದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಪೊಲೀಸು ಅಧಿಕಾರಿಯು, ವ್ಯಕ್ತಿಯನ್ನು ದಸ್ತಗಿರಿ ಮಾಡಿದ್ದು ಮತ್ತು ಕೆಲವು ವಸ್ತುಗಳನ್ನು ಅಭಿಗ್ರಹಿಸಿದ್ದು ಈ ಉಪಬಂಧಗಳ ಮೇರೆಗೆ ಅಧಿಕಾರಗಳನ್ನು ಚಲಾಯಿಸುವಾಗ ಯಾವುದೇ ಹೆಚ್ಚಿನ ತನಿಖೆಯನ್ನು ನಡೆಸಲು

ಅಧಿಕಾರವ್ಯಾಪ್ತಿಯನ್ನು ಹೊಂದಿಲ್ಲದಿದ್ದರೆ, ಸಕ್ಷಮ ಪೊಲೀಸು ಅಧಿಕಾರಿಗೆ ಅಥವಾ ವಿಷಯವನ್ನು ತನಿಖೆ ಮಾಡಲು ಅಧಿಕಾರವ್ಯಾಪ್ತಿ ಹೊಂದಿರುವ ಪೊಲೀಸು ಅಧಿಕಾರಿಗೆ ತಿಳಿಸುವುದು ಅವನ ಕರ್ತವ್ಯವಾಗಿದೆ ಮತ್ತು ಅನವಶ್ಯಕ ವಿಳಂಬ ಮಾಡದೆ, ದಸ್ತಗಿರಿ ಮಾಡಿದ್ದ ಅಂಥ ವ್ಯಕ್ತಿಯನ್ನು ಮತ್ತು ಅಭಿಗ್ರಹಿಸಿದ ಅಂಥ ವಸ್ತುಗಳನ್ನು ಪೊಲೀಸು ಠಾಣೆಯ ಆಡಳಿತವನ್ನು ಹೊಂದಿರುವ ಅಂಥ ಅಧಿಕಾರಿಯ ಮುಂದೆ ಇಡಬೇಕು ಎಂಬ ಸೂಚನೆಯನ್ನು ಇದು ನೀಡುತ್ತದೆ.

21. ಮೇಲಿನ ಸದರಿ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪ್ರಕರಣದ ವಾಸ್ತವಿಕ ಸಂಗತಿಗಳನ್ನು ಹೊಂದಿಸಿಕೊಂಡು ಅವುಗಳನ್ನು ಓದಲಾಗಿದ್ದರೆ, ಸಂಜ್ಞೇಯ ಅಪರಾಧ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ಎಡಿಜಿಪಿ, ಲೋಕಾಯುಕ್ತ, ಬೆಂಗಳೂರು ಇವರ ಅಪೂರ್ಣ ಮಾಹಿತಿಯ ಆಧಾರದ ಮೇಲೆ, 2ನೇ ಎದುರುದಾರ – ಪೊಲೀಸರು, ವಾಸ್ತವಿಕ ಸಂಗತಿಗಳಲ್ಲಿ ಗಮನಿಸಲಾದಂತೆ ಮತ್ತು ವಾಸ್ತವವಾಗಿ, ಯಾವುದೇ ಸಂಜ್ಞೇಯ ಅಪರಾಧವು ನಡೆದಿದೆಯೇ ಅಥವಾ ಇಲ್ಲವೆ ಎಂಬುದನ್ನು ದೃಢಪಡಿಸುವ ಸಲುವಾಗಿ ನಿರ್ದಿಷ್ಟ ಸ್ಥಳಕ್ಕೆ ದಾವಿಸಿದರೆಂಬುದು ಸ್ಪಷ್ಟವಾಗಿದ್ದು, ಅಂಥ ಪರಿಶೀಲನೆ ಅವಧಿಯಲ್ಲಿ ಅರ್ಜಿದಾರನ ಬಳಿ ಸ್ಪಷ್ಟಪಡಿಸಲಾಗದ ಹಣ ಪತ್ತೆಯಾಗಿದೆ. ಆದುದರಿಂದ ಕೆಲವು ಸಂಜ್ಞೇಯ ಅಪರಾಧವನ್ನು ಅವನು ಎಸಗಿರಲೇಬೇಕೆಂದು ಆದುದರಿಂದ ಕೂಡಲೇ ಅಭಿಗ್ರಹಿಸಲಾದ ವಸ್ತುಗಳು ಮತ್ತು ದಸ್ತಗಿರಿ ಮಾಡಿದ ವ್ಯಕ್ತಿಯೊಂದಿಗೆ ಇದನ್ನು ಅಧಿಕಾರವ್ಯಾಪ್ತಿಯುಳ್ಳ ಪೊಲೀಸು ಠಾಣೆಗೆ ಎಂದರೆ, ಆಪಾದಿತ ಅಪರಾಧಗಳಿಗೆ ಸಂಬಂಧಿಸಿದ ಅಪರಾಧ ಸಂಖ್ಯೆ 4/2015ರಲ್ಲಿನ ಮೊಕದ್ದಮೆಯನ್ನು ದಾಖಲಿಸಿರುವ ಡಿವೈಎಸ್‌ಪಿ, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ವಹಿಸಿದೆಯೆಂದು ಭಾವಿಸಿದ್ದಾನೆ. ಆದುದರಿಂದ ನನ್ನ ಅಭಿಪ್ರಾಯದಲ್ಲಿ, ಪ್ರಾರಂಭಿಸಲಾದ ವ್ಯವಹರಣೆಗಳು, ಕಾನೂನಿಗನುಸಾರವಾಗಿವೆ ಮತ್ತು ವಿಷಯವನ್ನು ತನಿಖೆಮಾಡಲು ಸಂಬಂಧಪಟ್ಟ ಪೊಲೀಸರಿಗೆ ಪರಿನಿಯಮವು ಅಧಿಕಾರ ನೀಡಿರುವಾಗ ಇದರ ಮಧ್ಯೆ ಅಷ್ಟು ಸುಲಭವಾಗಿ ಹಸ್ತಕ್ಷೇಪ ಮಾಡಲಾಗುವುದಿಲ್ಲ.

22. ವಿಷಯದ ಈ ದೃಷ್ಟಿಯಿಂದ ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಪೊಲೀಸು ಅಧೀಕ್ಷಕ, ಚಿತ್ರದುರ್ಗ ಇವರು ನಡೆಸಿದ ಮೇಲಿನ ಸದರಿ ಪ್ರಾರಂಭಿಕ ವಿಚಾರಣೆಯು ತನಿಖೆಗೆ ಕಾರಣವಾಗುವುದಿಲ್ಲ. ಆದರೆ, ಇದು ಪ್ರಾರಂಭಿಕ ವಿಚಾರಣೆಯ ಸ್ವರೂಪದಲ್ಲಿದೆಯಷ್ಟೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಆದುದರಿಂದ ಈ ನಿರ್ದಿಷ್ಟ ಮೊಕದ್ದಮೆಯಲ್ಲಿ, ಮಾನ್ಯ ವಕೀಲರು ಉಲ್ಲೇಖಿಸಿದ ಮೇಲಿನ ಸದರಿ ನಿರ್ಣಯಗಳು, ನೇರವಾಗಿ, ವಿಷಯಕ್ಕೆ ಅನ್ವಯವಾಗುವುದಿಲ್ಲ. ಆದುದರಿಂದ ನನ್ನ ಅಭಿಪ್ರಾಯದಲ್ಲಿ ಈ ಅರ್ಜಿಯು ವಜಾಗೊಳಿಸಲು ಅರ್ಹವಾಗಿರುತ್ತದೆ.

ತದನುಸಾರವಾಗಿ, ಅರ್ಜಿಯನ್ನು ವಜಾಗೊಳಿಸಲಾಗಿದೆ.

---